# ವಾರ್ತಾ ವಿಶ್ಲೇಷಣೆ

## ಸರ್ಕಾರಿ ನೌಕರರ ಸ್ತುತ್ಯ ಕಾರ್ಯ

ಸರ್ಕಾರಿ ನೌಕರರು ಎಂದರೆ ನಮ್ಮ ಮನಸ್ಸಿಗೆ ಬರುವ ಭಾವನೆ ಏನು? ಹತಾಶೆಯ ಭಾವನೆ. ಕಡಿಮೆ ಕೆಲಸ, ಜಾಸ್ತಿ ಸಂಬಳದ ಜೊತೆಗೆ ಒಂದಷ್ಟು ಗಿಂಬಳ (ಲಂಚ). ಇದೇ ತಾನೆ? ಆದರೆ ಮುಂಬಯಿಯ ಒಂದು ಸರ್ಕಾರಿ ಕಛೇರಿಯ ಗುಮಾಸ್ತರು, ಬೆರಳಚ್ಚಿನವರು ಮತ್ತಿತರ ಕೆಳವರ್ಗದ ನೌಕರರು ತಾವು ಹಾಗಲ್ಲ ಎನ್ನುವುದನ್ನು ತೋರಿಸಿಕೊಟ್ಟಿದ್ದಾರೆ. ತಮ್ಮ ಏಕತಾನದ, ಅರ್ಥಹೀನವಾದ ಬದುಕಿಗೆ ಅರ್ಥಕಲ್ಪಿಸುವ, ಅದರ ಮೂಲಕ ಸಾವಿರಾರು ಬಡ ವಿದ್ಯಾರ್ಥಿಗಳ ಬಾಳನ್ನು ಬೆಳಗುವ ಮಹತ್ಕಾರ್ಯವನ್ನು ಕೈಗೊಂಡಿದ್ದಾರೆ.

ರತ್ನಗಿರಿ ಜಿಲ್ಲೆಯಲ್ಲಿನ ಶಾಲೆಗಳು ದೂರದೂರ ಇದ್ದು ಅನೇಕ ಸೌಲಭ್ಯಗಳಿಂದ ವಂಚಿತವಾಗಿವೆ. ಬಹುತೇಕ ಶಾಲೆಗಳಲ್ಲಿ ಪೀಠೋಪಕರಣಗಳಿಲ್ಲ, ಮಕ್ಕಳು ಬರಿ ನೆಲದ ಮೇಲೆ ಕುಳಿತು ಪಾಠ ಕೇಳಬೇಕು. ಅಲ್ಲಿನ ಶಾಲೆಗಳ ವಿದ್ಯಾರ್ಥಿಗಳಿಗೆ ಮೂಲಭೂತ ಆವಶ್ಯಕತೆಗಳಾದ ಶಾಲಾ ಸಮವಸ್ತ್ರ, ಮಳೆಗಾಲದಲ್ಲಿ ಕೊಡೆಗಳ ಕೊರತೆ. ಅವರ ಪೋಷಕರು ಅವುಗಳ ಖರ್ಚನ್ನು ಭರಿಸಲಾಗದಷ್ಟು ಬಡವರು. ಹೀಗಾಗಿ ಅನೇಕ ಮಕ್ಕಳು ೭-೮ ತರಗತಿಗಳನ್ನು ತಲುಪುತ್ತಲೇ ಶಾಲೆಗಳನ್ನು ಬಿಟ್ಟುಬಿಡುವರು - ಹೀಗಿತ್ತು ಅಲ್ಲಿನ ಪರಿಸ್ಥಿತಿ.

ಆಗ ನೆರವಿಗೆ ಬಂದವರು ಈ ಸರ್ಕಾರಿ ನೌಕರರು. ಅದಕ್ಕಾಗಿ "ಲಂಜಾ ರಾಜಾಪುರ್ ಸಂಗಮೇಶ್ವರ ತಾಲೂಕಾ ಉತ್ಕರ್ಷ ಮಂಡಲ್" - ಎಂಬ ಸಂಸ್ಥೆಯನ್ನು ೧೫ ವರ್ಷಗಳ ಹಿಂದೆ ಆರಂಭಿಸಿದರು. ಶಾಲಾ ಮಕ್ಕಳಿಗೆ ಬೇಕಾದ ಸಮವಸ್ತ್ರದ ಬಟ್ಟೆ ಮತ್ತು ಸಲಕರಣೆಗಳನ್ನು ದಾನಿಗಳಿಂದ ಸಂಗ್ರಹಿಸಲು ಪ್ರಾರಂಭಿಸಿದರು. ಮಂಡಲದ ಕಾರ್ಯದರ್ಶಿಗಳಾದ ಶ್ರೀ ಪವಾರ್ ಎನ್ನುವವರು ತಮ್ಮ ಸ್ವಂತ ಹೆಸರಿನಲ್ಲಿ ೧೫,೦೦೦ ರೂಪಾಯಿ ಸಾಲವನ್ನೂ ಮಾಡಿದರು.

ಈ ಸಂಘದವರು ಪ್ರತಿ ವರ್ಷ ಜೂನ್ ತಿಂಗಳಲ್ಲಿ ಒಂದು ವ್ಯಾನ್ ತುಂಬ ಸಲಕರಣೆಗಳನ್ನು ತುಂಬಿಕೊಂಡು, ಒಂದು ವಾರದ ಕಾಲ, ದೂರದೂರದ ಹಳ್ಳಿಗಳಿಗೆ ಹೋಗುವರು. ಶಾಲೆಗಳಿಗೆ ಭೇಟಿಕೊಟ್ಟು ತಾವು ತಂದ ಬಟ್ಟೆ ಮತ್ತು ಉಪಕರಣಗಳನ್ನು ಹಂಚುವರು. ಇವೆಲ್ಲ ಬಹಳ ಸುವ್ಯವಸ್ಥಿತವಾಗಿ ನಡೆಯುವುದು.

ಸ್ವಾಮಿ ವಿವೇಕಾನಂದರು ಮೈಸೂರಿನ ಮಹಾರಾಜರಿಗೆ ಬರೆದ ಪತ್ರದಲ್ಲಿ ಹೀಗೆ ಹೇಳುತ್ತಾರೆ: "ಯಾರು ಇತರರಿಗಾಗಿ ಜೀವಿಸುತ್ತಾರೋ ಅವರು ನಿಜವಾಗಿ ಜೀವಿಸುತ್ತಾರೆ. ಉಳಿದವರು ಸತ್ತಂತೆ ಇರುತ್ತಾರೆ" ಎಂದು. ತಮ್ಮ ಸ್ವಾರ್ಥದ ಸೀಮಿತತೆಯಿಂದ ಮೇಲೆದ್ದು ಜನಸಾಮಾನ್ಯರ ಕುಂದುಕೊರತೆಗಳಿಗೆ ಸ್ಪಂದಿಸುವ ಈ ಸರ್ಕಾರಿ ನೌಕರರ ಆದರ್ಶವನ್ನು ಮಿಕ್ಕ ಎಲ್ಲ ಸರ್ಕಾರಿ ನೌಕರರೂ ಸ್ವಲ್ಪ ಮಟ್ಟಿಗಾದರೂ ಅನುಸರಿಸಿದರೆ, ನಮ್ಮ ದೇಶ ಸುಭಿಕ್ಷವಾಗುವುದರಲ್ಲಿ ಸಂದೇಹವಿಲ್ಲ. ಅಲ್ಲವೇ?

## ಆರ್ಥಿಕ ಪ್ರಗತಿ ಮತ್ತು ಸಾಮಾಜಿಕ ಸ್ವಾಸ್ಥ್ಯ

ಭಾರತದ ಆರ್ಥಿಕ ಕ್ಷೇತ್ರದಲ್ಲಿ ಹಿಂದೆಂದೂ ಕಾಣದ ಪ್ರಗತಿ ಆಗುತ್ತಿದೆ. ಭಾರತವು ಹಿಂದಿನ ವರ್ಷಕ್ಕಿಂತ ಶೇಕಡ ೭ ರಷ್ಟು ಹೆಚ್ಚು ಆರ್ಥಿಕ ಪ್ರಗತಿಯನ್ನು ಹೊಂದಿದೆ. ಮುಂಬಯಿಯ ಶೇರು ಮಾರುಕಟ್ಟೆಯಲ್ಲಿ ಸೂಚ್ಯಂಕವು ದಾಖಲೆಯ ಮಟ್ಟವನ್ನು ತಲುಪಿದೆ. ವಿದೇಶೀ ಕಂಪನಿಗಳು ಸಾವಿರಾರು ಕೋಟಿ ರೂಪಾಯಿಗಳ ಬಂಡವಾಳವನ್ನು ಭಾರತದ ಔದ್ಯೋಗಿಕ ರಂಗದಲ್ಲಿ ಹೂಡುತ್ತಿವೆ. ಅನೇಕ ಐ.ಟಿ. ಮತ್ತು ಬಿ.ಟಿ. ಕಂಪನಿಗಳು ಆರಂಭಗೊಂಡಿದ್ದು, ಸಾವಿರಾರು ಯುವಕ-ಯುವತಿರನ್ನು ಆಕರ್ಷಿಸುತ್ತಿವೆ.

ಈ ಯಶಸ್ಸಿನ ಕತೆಗೆ ಮಾರುಹೋದ ಮಾಧ್ಯಮಗಳು ಕೂಡ ಭಾರತ ಒಂದು ಸಂಪದ್ಭರಿತ ರಾಷ್ಟ್ರವೆಂಬಂತೆ ಭ್ರಮೆಯನ್ನು ಹುಟ್ಟಿಸುತ್ತಿವೆ. ನಿತ್ಯವೂ ಮಾರುಕಟ್ಟೆಗೆ ಬಿಡುಗಡೆಯಾಗುತ್ತಿರುವ ಹೊಸ ಹೊಸ ಭೋಗಸಾಧನಗಳು ಗ್ರಾಹಕರ ಬೇಟೆಯಲ್ಲಿ ತೊಡಗಿವೆ. ದಿನನಿತ್ಯದ ಬಳಕೆಯ ಸಾಧನಗಳಾದ ಉಪ್ಪು, ಅಕ್ಕಿ ಮುಂತಾದವುಗಳನ್ನೂ ಬಹುರಾಷ್ಟ್ರೀಯ ಕಂಪನಿಗಳು ಪ್ಯಾಕೇಟುಗಳಲ್ಲಿ ಮಾರುತ್ತಿವೆ. ನಾವು ಕುಡಿಯಲು ಬಾಟಲು ನೀರನ್ನೇ ಕೊಳ್ಳಬೇಕು, ತರಕಾರಿ-ಸೊಪ್ಪುಗಳನ್ನು ಕೂಡ ಹವಾನಿಯಂತ್ರಿತ ಸೂಪರ್ ಮಾರ್ಕೆಟ್‌ಗಳಲ್ಲೇ ಕೊಳ್ಳಬೇಕು.

**ಹೀಗೆ ಉದಾರೀಕರಣ, ಜಾಗತೀಕರಣ ಮತ್ತು ಖಾಸಗೀಕರಣಗಳಿಂದ** ಉಂಟಾಗಿರುವ ಆರ್ಥಿಕ ಪ್ರಗತಿ ಕಳೆದ ಕೆಲವು ವರ್ಷಗಳಿಂದ ನಾವು ಬಾಳುವ ರೀತಿಯನ್ನೇ, ನಾವು ಇತರರೊಡನೆ ವ್ಯವಹರಿಸುವ ಬಗೆಯನ್ನೇ ಮತ್ತು ಮೂಲಭೂತವಾಗಿ ನಮ್ಮ ಚಿಂತನಾಪ್ರಕಾರವನ್ನೇ ಬದಲಾಯಿಸುತ್ತಿರುವುದನ್ನು ಸಮಾಜಶಾಸ್ತ್ರಜ್ಞರು ಕಂಡುಕೊಂಡಿದ್ದಾರೆ. ಮಾನವನು ಸ್ಥಿರವಾದ ಶಾಂತಿಯನ್ನೂ ಆಂತರಿಕ ತೃಪ್ತಿಯನ್ನೂ ಕೊಡುವ ಮೌಲ್ಯಗಳ ಮೇಲೆ ಅವಲಂಬಿತವಾಗುವುದು ಕಡಮೆಯಾಗುತ್ತಲಿದೆ. ಅದಕ್ಕೆ ಬದಲಾಗಿ ಬಾಳು ಹೆಚ್ಚು ಹೆಚ್ಚು ಬಾಹ್ಯಮುಖವಾಗುತ್ತ, ಭೋಗವಸ್ತುಗಳ ಮತ್ತು ಅವುಗಳು ಉಂಟುಮಾಡುವ ತಾತ್ಕಾಲಿಕ ಉದ್ವೇಗದ ಮೇಲೆ ಆಧಾರಿತವಾಗಿದೆ. ಅವುಗಳಿಗೆ ಮಕ್ಕಳು ಹುಟ್ಟಿದಾಗಿನಿಂದ ಅಂಟಿಕೊಂಡುಬಿಡುತ್ತಾರೆ. ದೊಡ್ಡವರು ಅವುಗಳೇ ಸರ್ವಸ್ವವೆಂದು ತಿಳಿದು, ಅವುಗಳಿಗಾಗಿ ದುಡಿದು ದುಡಿದು ಬಸವಳಿದು ಹೋಗುತ್ತಾರೆ. ಬಾಳೆಂಬುದು ಪ್ರತಿದಿನವೂ ಹೊಸ ಹೊಸ ರೂಪದಲ್ಲಿ ಹೊರಬರುತ್ತಿರುವ ಉಪಭೋಗ ಸಾಮಗ್ರಿಗಳ ಗಳಿಕೆ, ಬಳಕೆ, ಉಳಿಕೆಗಳಿಗಷ್ಟೆ ಸೀಮಿತವಾಗಿಬಿಡುತ್ತದೆ.

ನೈತಿಕತೆ ಮತ್ತು ಆಧ್ಯಾತ್ಮಿಕತೆಗಳಿಂದ ಮಾತ್ರ ಆರ್ಥಿಕ ಪ್ರಗತಿಗೆ ಗುಣಾತ್ಮಕವಾದ ಮೌಲ್ಯ ಬರುತ್ತದೆ. ಒಬ್ಬ ಹಿರಿಯರು ಹೇಳುತ್ತಾರೆ, ನಾವು ಪ್ರತಿಯೊಂದು ಮನೆಯಲ್ಲಿಯೂ ಆನೆಯನ್ನು ಕಟ್ಟಿಕೊಳ್ಳಬೇಕು ಎಂದು. "ಆ" ಎಂದರೆ ಆರೋಗ್ಯ, "ನೆ" ಎಂದರೆ ನೆಮ್ಮದಿ. ಈಗ ಹೇಳಿ, ಒಡನೆಯೇ ಆನೆಯನ್ನು ಹಿಡಿದು ಕಟ್ಟೋಣವೇ? ✪